## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **2015–16ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ಕೇಂದ್ರ ಸಹಾಯಧನ ಬಿಡುಗಡೆ ಕುರಿತು

ಓದಲಾಗಿದೆ: ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: **5--40/2015–BG** ದಿನಾಂಕ 20.11.2015

**ಪ್ರಸ್ತಾವನೆ :**

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, **2015–16ನೇ** ಸಾಲಿನ ರಾಜ್ಯ ಆಯವ್ಯಯದಡಿ **ರೂ.1256.00** ಲಕ್ಷಗಳನ್ನು ಕೇಂದ್ರ ಹಾಗೂ ರಾಜ್ಯ ಪಾಲಾಗಿ ಜಿಲ್ಲಾ ವಲಯದಡಿ ಹಂಚಿಕೆ ಮಾಡಿದೆ.

ಮೇಲೆ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ನವ ದೆಹಲಿ ರವರು **2015--16ನೇ** ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ **ರೂ.863.50**ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಪೈಕಿ **ರೂ.460.63** ಲಕ್ಷಗಳನ್ನು ಜಿಲ್ಲೆಗಳಿಗೆ ನಿಗದಿಪಡಿಸಿದ ಭೌತಿಕ ಗುರಿ /ಜಿಲ್ಲಾ ವಲಯದ ಆಯವ್ಯಯದಡಿ ಲಭ್ಯವಾಗುವ ಅನುದಾನ/ ಬಿಡುಗಡೆಯಾದ ಅನುದಾನದ ಮಿತಿಗೊಳಪಟ್ಟು, **ಲೆಕ್ಕ ಶೀರ್ಷಿಕೆ 2810--60--196-6-01(ಯೋಜನೆ)**ರಡಿ ಸಂಬಂಧಿತ ಜಿಲ್ಲಾ ಪಂಚಾಯತ್‌ಗಳಿಗೆ **ಅನುಬಂಧದಲ್ಲಿ** ಹಂಚಿಕೆ ಮಾಡಿದಂತೆ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

### ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ/52/ಜೈಅಯೋ/2015(ಭಾಗ-1) ಬೆಂಗಳೂರು, ದಿನಾಂಕ 011.03.2016

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, **2015–16ನೇ** ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯ ಅನುಷ್ಠಾನಕ್ಕಾಗಿ ಸಾಮಾನ್ಯ ವರ್ಗದಡಿ ಬಿಡುಗಡೆ ಮಾಡಿದ ಒಟ್ಟಾರೆ ಕೇಂದ್ರ ಸಹಾಯಧನದ ಪೈಕಿ ರೂ.460.63 ಲಕ್ಷ (**ನಾಲ್ಕುನೂರ ಅರವತ್ತು ಲಕ್ಷದ ಅರವತ್ಮೂರು ಸಾವಿರ ರೂಪಾಯಿಗಳು ಮಾತ್ರ**)ಗಳನ್ನು ಇದರೊಂದಿಗೆ ಲಗತ್ತಿಸಲಾದ **ಅನುಬಂಧದಲ್ಲಿ** ಹಂಚಿಕೆ ಮಾಡಿದಂತೆ ಬಿಡುಗಡೆ ಮಾಡಿ ಆದೇಶಿಸಿದೆ.

ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವು ಮಹಾಲೇಖಪಾಲರ ಲೆಕ್ಕ ತಪಾಸಣೆಗೊಳಪಟ್ಟಿದ್ದು, ಕಾರ್ಯಕ್ರಮದ ಮಾರ್ಗಸೂಚಿಗಳನ್ವಯ ಉದ್ದೇಶಿತ ಯೋಜನೆಗಳಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡಬಾರದು, ವ್ಯಪಗತ ಮಾಡಬಾರದು ಹಾಗೂ **"ಗಾಂಧಿ ಸಾಕ್ಷಿ ಕಾಯಕ"** ತತ್ರಾಂಶದಲ್ಲಿ ಕಡ್ಡಾಯವಾಗಿ ಅಳವಡಿಸಬೇಕು ಎಂಬ ಷರತ್ತಿಗೊಳಪಟ್ಟು ಈ ಅನುದಾನ ಬಿಡುಗಡೆ ಮಾಡಿದೆ.

ಸದರಿ ಅನುದಾನವನ್ನು **ಲೆಕ್ಕ ಶೀರ್ಷಿಕೆ 2810–60--196-6–01(ಯೋಜನೆ)**ರಡಿ ವೆಚ್ಚ ಭರಿಸಿ, ಈ ಅನುದಾನ ಬಳಕೆ ಮಾಡಿಕೊಂಡಿರುವ ಫಲಾನುಭವಿಗಳ ವಿವರಗಳನ್ನು ಹಾಗೂ ನಿಗದಿತ ನಮೂನೆಗಳಲ್ಲಿ ಸಿ.ಎರವರಿಂದ ಆಡಿಟ್ ಮಾಡಿಸಿ ಹಣಬಳಕೆ ಪ್ರಮಾಣ ಪತ್ರವನ್ನು ನೀಡುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/40/ವೆಚ್ಚ-6 /2016 ದಿನಾಂಕ 02.03.2016 ರಲ್ಲಿ ಸಹಮತಿ ಪಡೆದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, (ಚಿತ್ರದುರ್ಗ ಮತ್ತು ಚಾಮರಾಜನಗರ ಹೊರತುಪಡಿಸಿ)
3. ಎಲ್ಲಾ ಜಿಲ್ಲಾ ಪಂಚಾಯತ್‌ನ ಉಪಕಾರ್ಯದರ್ಶಿ (ಅಭಿವೃದ್ಧಿ) / ಮುಖ್ಯ ಲೆಕ್ಕಾಧಿಕಾರಿಗಳು, (ಚಿತ್ರದುರ್ಗ ಮತ್ತು ಚಾಮರಾಜನಗರ ಹೊರತುಪಡಿಸಿ)
4. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5. ರಾಜ್ಯದ ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು, (ಚಿತ್ರದುರ್ಗ ಮತ್ತು ಚಾಮರಾಜನಗರ ಹೊರತುಪಡಿಸಿ)
6. ಖಜಾನೆಗಳ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು.
7. ಉಪ ನಿರ್ದೇಶಕರು, ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, ಸೆಕೆಂಡ್ ಬ್ಲಾಕ್, ಸೆಕೆಂಡ್ ಫ್ಲೋರ್, ಖನಿಜ ಭವನ, ಸೌತ್ ಎಂಟ್ರೆನ್ಸ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ವಿಶೇಷ ಅಧಿಕಾರಿಗಳು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು /ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾ) ರವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
2. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
3. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 52 ಜೈಅಯೋ 2015(ಭಾಗ-1) 2015, ದಿನಾಂಕ 11.03.2016 ಕ್ಕೆ ಅನುಬಂಧ

| ಕ್ರ ಸಂ | ಜಿಲ್ಲೆ | ಬಿಡುಗಡೆ ಮಾಡಿದ ಕೇಂದ್ರ ಸಹಾಯಧನ ( ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1 | ಬಾಗಲಕೋಟೆ | 10.916 |
| 2 | ಬೆಂಗಳೂರು (ಗ್ರಾ) | 21.210 |
| 3 | ಬೆಂಗಳೂರು (ನ) | 16.350 |
| 4 | ಬೆಳಗಾಂ | 2.840 |
| 5 | ಬಳ್ಳಾರಿ | 19.590 |
| 6 | ಬೀದರ್ | 32.150 |
| 7 | ವಿಜಯಪುರ | 16.300 |
| 8 | ಚಿಕ್ಕಮಗಳೂರು | 17.130 |
| 9 | ಚಿಕ್ಕಬಳ್ಳಾಪುರ | 13.060 |
| 10 | ದಕ್ಷಿಣ ಕನ್ನಡ | 33.930 |
| 11 | ದಾವಣಗೆರೆ | 16.350 |
| 12 | ಧಾರವಾಡ | 16.350 |
| 13 | ಗದಗ | 8.150 |
| 14 | ಕಲಬುರುಗಿ | 16.000 |
| 15 | ಹಾಸನ | 40.000 |
| 16 | ಹಾವೇರಿ | 32.710 |
| 17 | ಕೊಡಗು | 9.770 |
| 18 | ಕೋಲಾರ | 3.240 |
| 19 | ಕೊಪ್ಪಳ | 16.350 |
| 20 | ಮಂಡ್ಯ | 9.110 |
| 21 | ಮೈಸೂರು | 32.710 |
| 22 | ರಾಮನಗರ | 3.380 |
| 23 | ರಾಯಚೂರು | 16.350 |
| 24 | ಶಿವಮೊಗ್ಗ | 15.110 |
| 25 | ತುಮಕೂರು | 0.510 |
| 26 | ಉಡುಪಿ | 0.499 |
| 27 | ಉತ್ತರ ಕನ್ನಡ | 20.560 |
| 28 | ಯಾದಗಿರಿ | 20.000 |
| | ಒಟ್ಟು | **460.63** |

(ಎನ್. ಕೃಷ್ಣ)

ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.